## ಅನುವಾದಿತ ಕತೆ

ಶುರು.

ಇದನ್ನೆಲ್ಲಾ ನೋಡಿ ಸಾವಿತ್ರಿಗೆ ತುಂಬಾ ದುಃಖವಾಗುತ್ತಿತ್ತು. ಅವರಿಗೆ ಭಾವ್ಯಾ ವರ್ತನೆಯಿಂದ ನಾಚಿಕೆಯಾಗುತ್ತಿರಲಿಲ್ಲ, ದಿನೇದಿನೇ ಅವರ ಮನಸ್ಸಿನಲ್ಲಿ ಚಿಂತೆ ಬೆಳೆಯುತ್ತಿತ್ತು. ಅವರಿಗೆ ಇದೆಲ್ಲವೂ ಒಗಟಾಗಿ ತೋರುತ್ತಿತ್ತು. ಭಾವ್ಯಾ ಯಾಕೆ ಹೀಗೆ ವರ್ತಿಸುತ್ತಿದ್ದಾರೆ? ಅವರ ತಲೆ ಕೆಟ್ಟಿರಬಹುದೇ. ಯೌವನದಲ್ಲಿ ಅದುಮಿಟ್ಟ ಆಸೆ ಆಕಾಂಕ್ಷೆಗಳೆಲ್ಲ ಈಗ ಉದ್ರಿಕ್ತವಾಗಿರಬಹುದೇ? ಇಂತಹ ನಡವಳಿಕೆಯನ್ನು ಏನೆಂದು ಕರೆಯಬಹುದು? ಭಾವ್ಯಾಗೆ ಏನಾಗಿದೆ? ಹುಚ್ಚು ಹಿಡಿದಿರಬಹುದೇ... ಮತಿಭ್ರಾಂತಿ ಆಗಿರಬಹುದೇ.ಅಥವಾ ಬೇರೆ ಯಾವುದಾದರೂ ರೋಗ ಹಿಡಿದಿರಬಹುದೇ... ಅವಳಿಗೆ ದಿನಪತ್ರಿಕೆಗಳ ಓದಿನಿಂದ ಆಲ್‌ಜೈಮರ್, ಡಿಮೆನ್‌ಶಿಯಾ... ಮೊದಲಾದ ಮಾನಸಿಕ ಕಾಯಿಲೆಗಳ ಕುರಿತು ಅಲ್ಪಸ್ವಲ್ಪ ತಿಳಿದಿತ್ತು. ಆ ರೋಗಗಳ ಚಿಹ್ನೆಗಳನ್ನು ಭಾವ್ಯಾವಿನ ನಡವಳಿಕೆಗೆ ಹೋಲಿಸಿ ನೋಡಿದಾಗ ಅವಳು ಬೆಚ್ಚಿಬಿದ್ದಳು. ಭಾವ್ಯಾ ನಡವಳಿಕೆ ಡಿಮೆನ್‌ಶಿಯಾದ ಕಡೆಗೆ ಬೆರಳು ತೋರಿಸುತ್ತಿತ್ತು. ಅದು ಅರಿವಿಗೆ ಬಂದ ಕೂಡಲೇ ಅವಳು ದೀಪಕನಲ್ಲಿ ಹೇಳಿದಳು, "ನನಗೆ ಇವರ ಆರೋಗ್ಯದ ಚಿಂತೆಯಾಗಿದೆ. ಇವರನ್ನು ಮಾನಸಿಕತಜ್ಞರಿಗೆ ಅಥವಾ ನರರೋಗತಜ್ಞರಿಗೆ ತೋರಿಸೋ."

"ಅದರ ಅವಶ್ಯಕತೆ ಇಲ್ಲ. ಅವರಿಗೆ ಏನೂ ಆಗಿಲ್ಲ. ಅವರಿಗೆ ಅಂಟಿಕೊಂಡಿರುವುದು ಮುದಿಭ್ರಾಂತಿ ಮಾತ್ರ. ಊರಿನಲ್ಲಿ ನಾವು ತಲೆ ಎತ್ತಿ ನಡೆಯದ ಹಾಗೆ ಮಾಡಿದ್ದಾರೆ. ಅವರನ್ನು ಏನು ಮಾಡಬೇಕು ಎಂಬುದನ್ನು ನಾನು ನೋಡಿಕೊಳ್ಳುತ್ತೇನೆ."

ಭಾವ್ಯಾಗೆ ಮಾನಸಿಕ ತೊಂದರೆ ಇದೆ ಎಂಬುದನ್ನು ಒಪ್ಪಿಕೊಳ್ಳಲು ದೀಪಕ ಸಿದ್ಧನಿರಲಿಲ್ಲ. ಅವನ ಪ್ರಕಾರ ಅದು ವಯಸ್ಸಿನೊಂದಿಗೆ ಕಾಡುವ ಮುದಿಭ್ರಾಂತಿ ಮಾತ್ರ. ಅವನು ಹೆಂಡತಿಯೊಂದಿಗೆ ಹೊರಗೆ ಹೋಗುವುದಿದ್ದರೆ ಮನೆಯ ಬಾಗಿಲನ್ನು ಮುಚ್ಚಿ ಹೊರಗಿನಿಂದ ಚಿಲಕ ಹಾಕಿಕೊಳ್ಳುವುದನ್ನು ಪ್ರಾರಂಭಿಸಿದ. ಈಗ ಭಾವ್ಯಾಗೆ ಮನೆಯಿಂದ ಹೊರಗೆ ಕಾಲಿಡುವುದು ಅಸಾಧ್ಯವಾಯಿತು. ಗಂಡನ ಜೊತೆ ಸಾವಿತ್ರಿಗೂ ಸೆರೆಮನೆವಾಸ. ಆಕೆ ಬಾಯಿ ಮುಚ್ಚಿ ಮೌನವಾಗಿರುತ್ತಿದ್ದಳು.

ಮನೆಯೊಳಗೆ ಭಾವ್ಯಾ ಸುಮ್ಮನಿರುತ್ತಿರಲಿಲ್ಲ. ಏನಾದರೂ ಕಿತಾಪತಿ ಮಾಡುತ್ತಲೇ ಇರುತ್ತಾರೆ. ಮೈಮೇಲೆ ಉಡುಪು ಧರಿಸದೆ ಓಡಾಡುವುದು, ಊಟಕ್ಕೆ ಕುಳಿತರೆ ಚಪ್ಪರಿಸುತ್ತಾ ಬಾಯಿಯಿಂದ ಜೋರಾಗಿ ಸದ್ದು ಹೊರಡಿಸುವುದು ಅಥವಾ ತಟ್ಟೆಯಲ್ಲಿರುವ ಅನ್ನವನ್ನು ಅಂಗೈಯಲ್ಲಿ ಎತ್ತಿ ಸುತ್ತಮುತ್ತ ಚೆಲ್ಲಿಬಿಡುವುದು. ಕೆಲವೊಮ್ಮೆ ಊಟ ಮಾಡದೆ ರೆಪ್ಪೆ ಅಲುಗಾಡಿಸದೆ ಬಡಿಸಿದ ತಟ್ಟೆಯನ್ನೇ ನೋಡುತ್ತಾ ಕುಳಿತುಬಿಡುವುದು. ನಿಂತಲ್ಲಿಯೇ ಮೂತ್ರವಿಸರ್ಜನೆ ಮಾಡುವುದು. ಬುದ್ಧಿ ಹೇಳಿದರೆ ಅವಳಿಗೇ ಜೋರು ಮಾಡುವುದು.

ಸಾವಿತ್ರಿಗೆ ಅವರನ್ನು ಸಂಭಾಳಿಸುವುದೇ ದೊಡ್ಡ ಕೆಲಸವಾಯಿತು. ಭಾವ್ಯಾಗೆ ತಲೆ ಸರಿಯಿಲ್ಲವೆಂದು ಅವಳಿಗೆ ಖಾತ್ರಿಯಾಯಿತು. ಅವರಿಗೆ ಮರೆವಿನ ರೋಗ ತಗುಲಿದೆ. ಅದು ಡಿಮೆನ್‌ಶಿಯಾ ಇರಬಹುದು. ಗಂಡನನ್ನು ವೈದ್ಯರಿಗೆ ತೋರಿಸಲು ಮಗ ಮತ್ತು ಸೊಸೆ ಸಿದ್ಧರಿಲ್ಲವೆಂದು ತಿಳಿದ ಬಳಿಕ ಸಾವಿತ್ರಿ ಮಗಳಿಗೆ ಕರೆ ಮಾಡಿದಳು. ಭಾವ್ಯಾಗೆ ವೈದ್ಯರಿಂದ ಚಿಕಿತ್ಸೆ ಕೊಡಿಸಲು ಹಣದ ತೊಂದರೆ ಇರಲಿಲ್ಲ. ಅವರಿಗೆ ನಿಯಮಿತವಾಗಿ ಪೆನ್ಶನ್ ಬರುತ್ತಿತ್ತು. ಅವರಲ್ಲಿ ಉಳಿತಾಯದ ಹಣವೂ ಸಾಕಷ್ಟು ಇತ್ತು. ಆದರೆ, ಅವಳಿಗೆ ರೋಗಿಯನ್ನು ವೈದ್ಯರಲ್ಲಿ ಕರೆದುಕೊಂಡು ಹೋಗುವುದೇ ದೊಡ್ಡ ಸಮಸ್ಯೆ. ಅದನ್ನು ಒಂಟಿಯಾಗಿ ನಿರ್ವಹಿಸುವುದು ಸಾವಿತ್ರಿಗೆ ಅಸಾಧ್ಯ. ಬಾಡಿಗೆಗೆ ಕಾರನ್ನು ತರಿಸಬೇಕು. ಗಂಡನನ್ನು ಸಂಭಾಳಿಸಿ ವೈದ್ಯರಿಗೆ ತೋರಿಸಬೇಕು, ಆಮೇಲೆ ಔಷಧಿಗಾಗಿ ಫಾರ್ಮಸಿಗೆ ಓಡಾಡಬೇಕು... ಇತ್ತೀಚಿನ ವರ್ಷಗಳಲ್ಲಿ ಅವಳು ಇಂತಹ ಕೆಲಸಗಳನ್ನೆಲ್ಲಾ ಒಟ್ಟೊಟ್ಟಿಗೆ ನಿಭಾಯಿಸಿದವಳೇ ಅಲ್ಲ. ಅಲ್ಲದೆ, ಈಗ ಅವಳಿಗೆ ಸಣ್ಣ ವಯಸ್ಸೇನೂ ಅಲ್ಲ. ಹೀಗಾಗಿ, ತನ್ನ ವಿನಂತಿಯನ್ನು ಮಗ ಮತ್ತು ಸೊಸೆ ಸ್ವೀಕರಿಸದಿರುವುದನ್ನು ನೋಡಿ ಸಾವಿತ್ರಿ ಮಗಳನ್ನು ಕರೆಯಿಸುವ ನಿರ್ಧಾರ ತಳೆದಳು. ಮಗಳು ತಂದೆಯನ್ನು ವೈದ್ಯರಲ್ಲಿಗೆ ಕರೆದುಕೊಂಡು ಹೋಗಬಹುದೆಂಬ ಭರವಸೆಯಲ್ಲಿ ಅವಳಿದ್ದರೆ,